Regd No. M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 121] ಬುಧವಾರ 15—1—47 [ಬಿಡಿ ಪ್ರತಿ 3 ಪೈ

ಖಿಲಾಪತ್ - ಪಾಕಿಸ್ತಾನ್ ಸ್ಕೀಂ

❋

ಶನಿವಾರದ ಸಂಚಿಕೆಯಿಂದ ಮುಂದಕ್ಕೆ]

ಈ ಕಾರ್ಯಕ್ರಮವೆಲ್ಲವೂ ಲೋಕೋದ್ಧಾರಕ್ಕಾಗಿಯೇ. ಏಕೆಂದರೆ ಮನುಷ್ಯನೆನ್ನುವವನಿಗೆ ಇಸ್ಲಾಂನಲ್ಲಿ ಸೇರಿದ ಹೊರತು ಅಭಿವೃದ್ಧಿಯುಂಟಾ ಗದು, ಪವಿತ್ರನಾಗನು, ಮೋಕ್ಷಸಿದ್ಧಿ ಸದು. ಮುಸ್ಲಿಂರಿಗೂ ಮುಸ್ಲಿಮೇತರರಿಗೂ ಮನುಷ್ಯನಿಗೂ ಪಶುವಿಗೂ ಇರುವ ವೈತ್ಯಾಸವಿದೆ ಆದುದರಿಂದ ಮುಸ್ಲಿಂರಲ್ಲದವರೆಲ್ಲರೂ ಪಶುಗಳೆಂದೇ ಹೇಳಬೇಕು. ಅಂಥವರು ಮೇಲೆ ನಾಗರೀಕರಂತೆ ಕಂಡುಬಂದರೂ ಅವರಿಗೆ ಪವಿತ್ರತೆಯೆನ್ನುವುದು ಎಷ್ಟು ಮಾತ್ರವೂ ಇರುವುದಿಲ್ಲ ಮಂಗವು ಮಂಗದ ರೂಪಿದಲ್ಲಿರುವವರೆಗೂ ಹೇಗೆ ಮನುಷ್ಯನಲ್ಲವೋ ಮಾನವನು ಮುಸ್ಲಿಂನಾಗದಿರುವವರೆಗೂ ಯಾವ ಬಗೆಯ ಅಭಿವೃದ್ಧಿಯನ್ನೂ ಹೊಂದಲಾರನು. ಕೆಲವು ಮುಸ್ಲೀಮೇತರರು ಇಂದು ದೊಡ್ಡ ಹುದ್ದೆಗಳಲ್ಲಿರುವಂಥವರು ದೊಡ್ಡ ಮನುಷ್ಯರಲ್ಲ. ಮಂಗವು ಗೋಡೆಯನ್ನು ಹತ್ತಿಕೊಂಡ ಮಾತ್ರಕ್ಕೆ ಅದು ಎತ್ತರವಾದಂತೆಯೇ ? ಬಲಿಷ್ಟವಾದ ಆನೆಯಾವಾಗ ಮನುಷ್ಯನಿಗಿಂತ ಹಿರಿಯದಾಗಲಾರದೋ ಹಾಗೆ ಬಲಿಷ್ಟನಾದ ಕಾಫಿರನೂ ಕೂಡ ಮುಸ್ಲಿಂಗಿಂತ ದೊಡ್ಡನನಾಗಲಾರನು. (ತ್ರಿ)

[ನಾಳೇ ಸಂಚಿಕೆ ನೋಡಿ

—o—

ರಾಜೀನಾಮೆ ಅಂಗೀಕಾರ

ಅಲಹಾಬಾದು ಜ 11 — ಕಾಂಗ್ರೆಸ್ ಕಾರ್ಯಕಾರಿ ಮಂಡಲಿಗೆ ಶ್ರೀ ಶರತ್ ಬೋಸರು ಕೊಟ್ಟ ರಾಜೀನಾಮೆಯನ್ನು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೃಪಲಾನಿಯವರು ಅಂಗೀಕರಿಸಿರುತ್ತಾರೆ.

ಉಪಾಧ್ಯಕ್ಷರ ಚುನಾವಣೆ

ಮೈಸೂರು ಜ 15— ಪುನರ್ರಚಿತವಾದ ಮೈಸೂರು ಪೌರಸಭೆಯ ಉಪಾಧ್ಯಕ್ಷರ ಚುನಾವಣೆಯು ಸಲುವಾಗಿ ಪೌರಸಭೆಯ ವಿಶೇಷ ಅಧಿವೇಶನವು ನಾ || 20 ರ ಸಂಜೆ 4 ಗಂಟೆಗ ನಡೆಯುವುದು. ಕಾಂಗ್ರೆಸ್ ಪಕ್ಷದ ಪರ ಶ್ರೀ ಎಂ ಸಿಂಹೈಯ್ಯಂಗಾರ್ಯರೂ, ಸ್ವತಂತ್ರ ಎಂ || ಎಂರ್ ನೂರ್ ಹುಸೇನ್ ಮತ್ತು ಡಬ್ಲ್ಯೂ. ಥಿಯೋಬಾಲ್ಡರೂ ನಿಂತಿದ್ದಾರೆ.

ವರ್ತಮಾನ ಸಂಗ್ರಹ

——

ಮೊಂಬಾಸಾ ಜ 11 — ಇಲ್ಲಿಯ ಒಬ್ಬ ವ್ಯಾಪಾರಿಯು ಆರೇಬಿಯಾಕ್ಕೆ ತುಪಾಕಿಗಳನ್ನು ರವ್ತು ಮಾಡುತ್ತಿದ್ದ ಆಪಾದನೆ ಮೇಲೆ ಡಸ್ಕಗಿರಿ ಮಾಡಲ್ಪಟ್ಟಿದ್ದಾನೆ.

o o

ಕರ್ವಾರ್ ಜ 12 — ಶಾಂತಿ ಪ್ರವಾಸದಲ್ಲಿ ಈಗ ಅನೇಗ್ರಾಮವಾದ ಕರ್ವಾರಾಕ್ಕೆ ಬಂದಿದ್ದಾರೆ. ದಾರಿಯಲ್ಲಿ ಕೆಸರು ಭೂಮಿ ಮೇಲೆ ಬರಿಕಾಲುಗಳಲ್ಲಿ ನಡೆದುದರಿಂದ ಕಾಲುಗಳು ಸ್ವಲ್ಪ ಗಾಯಗೊಂಡು ಬ್ಯಾಂಡೇಜು ಕಟ್ಟಲ್ಪಟ್ಟಿವೆ.

.....

ದಕ್ಷಿಣ ಭಾರತ ಮುಸ್ಲಿಂರಿಗೆ ಬೇರೆ ವಿಶ್ವವಿದ್ಯಾಲಯವಿರಬೇಕೆಂದು ಮದ್ರಾಸಿನ ಬೇಗಂ ಅನುರುದೀನರು ಹೇಳಿದ್ದಾರೆ.

o o

ಡೂಕ್ ಅಪ್ ವಿಂಡ್ಸರರು ಹಿಂದೆ ಪ್ರಿನ್ಸ್ ಆಫ್ ವೇಲ್ಸರಾಗಿದ್ದು ಭಾರತಕ್ಕೆ ಬಂದಿದ್ದಾಗ ಅವರಿಗೆ ಆಂಗ್ಲೋ ಇಂಡಿಯನ್ ಪತ್ರಿಕೋದ್ಯೋಗಿ ನೀವು ಒಬ್ಬ ಭಾರತೀಯ ಹುಡುಗಿಯನ್ನು ಮದುವೆಯಾಗಿ ಎಂದು ತಿಳಿಸಿದ್ದನಂತೆ

.....

ಜಾಕುವನನ್ನು ತಯಾರಿಸುವುದು ಬಂದು ಅಪರಾಧವೆಂದು ಭಾರತ ಶಾಸನ ಸಭೆ, ಕಾನೂನಿನಲ್ಲಿ ಸೇರಿಸಲು ಕೇಂದ್ರ ಸಂಕಾರದ ಗೃಹ ಮಂತ್ರಿಗಳ ಅಲೋಚನೆಯುಲ್ಲಿದೆಯಂತೆ ! ಇದರಿಂದ ವಿದ್ಯಾರ್ಥಿಗಳು ಪೆನ್ಸಿಲ್ಲನ್ನು ವರಿಯುವುದಕ್ಕಾಗುವದಿಲ್ಲವಾಗಿ ರಾಶಿರಾಶಿಯಾಗಿ ಹೇರಳವಾಗಿ ಬಂದು ಬೀಳುತ್ತಿರುವ ಪೌಂಟೆಫೆಗಳನ್ನು ಉಪಯೋಗಿಸಬಹುದು !

ಬೊಂಬಾಯಿ ಜ 12 — ಪೂನಾದ ಹತ್ತಿರ ಸರದಾರ ಪಟೇಲರ ಹೆಸರಿನಲ್ಲಿ ಒಂದು ಕೈಗಾರಿಕೆ ಪಟ್ಟಣವನ್ನು ಕಟ್ಟಿ ಅದಕ್ಕೆ ' ವಲ್ಲಭ ನಗರ ' ವೆಂದು ಕರೆಯುವ ಅಲೋಚನೆಯು ಬೊಂಬಾಯಿನ ಭಾರಿ ಕೈಗಾರಿಕಾ ವರ್ತಕರ ತಲಗೆ ಹತ್ತಿದ.

o o

ನವದೆಹಲಿ ಜ 13 — ಡೆಲ್ಲಿ ಪ್ರಾಂತ್ಯಗಳ 355 ಪಾಠಶಾಲೆಗಳಲ್ಲಿ 5 ಸಾವಿರ ಉಪಾಧ್ಯಾಯರ ಮುಷ್ಕರ ಹೂಡಿದ್ದಾರೆ. ಸುಮಾರು 1 ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ.

o o

ಬೆಂಗಳೂರು ಜ 12 — 5 ವರ್ಷ ಯೋಜನೆಯಲ್ಲಿ 250 ಬೇಸಿಕ್ ಶಾಲೆಗಳನ್ನು ತೆಗೆಯುವ ವಿಷಯವು ಮೈಸೂರು ಸರಕಾರದ ಪರ್ಯಾಲೋಚನೆಯಲ್ಲಿದೆಯಂತೆ !

o o

ನವದೆಹಲಿ ಜ 12 — ಪಶ್ಚಿಮದಲ್ಲಿ ಅಮೇರಿಕಾಕ್ಕೆ ಏನೇನು ಕಾರ್ಯಗಳಿವೆಯೇ ಅಂಥವುಗಳೇ ಪೂರ್ವದಲ್ಲಿ ಭಾರತಕ್ಕೆಯೆಂದೂ ಇವೆಂದು ದೇಶಗಳ ಸಹಕಾರವಿರಬೇಕೆಂದೂ ಅಮೇರಿಕಾ ರಾಯಭಾರಿಯಾಗಿ ಹೊಂಡಿಲಿರುವ ಅಸಪಾಲಿಯವರು ಹೇಳಿದ್ದಾರೆ.

o o

ಟೆಹರಾನ್ ಜ 13 — ಈಗ ನಡೆದ ಚುನಾವಣೆಯು ಸ್ವಾತಂತ್ರ್ಯ ವಾದುಲ್ಲವೆಂದು ಪರ್ಷಿಯಾರಾಜರು ತಿಳಿಯುಕೊಳ್ಳವರೆಗೆ ಅಲ್ಲಿಯ ಕೋಲಿಜ ಪಾರ್ಟಿಯು ಉಮೇದುವಾರರ, ಆರಮನೆಯಲ್ಲಿ ಅಶ್ರಿತರಾಗಿ ನೆಲಸಿ ತನ್ಮೂಲಕ ಸತ್ಯಾಗ್ರಹ ನಡೆಸಲು ಪ್ರಾರಂಭಿಸಿರುವರು. ಇರಾನ್ ಇತಿಹಾಸಗಾರರ ಅಭಿಪ್ರಾಯದಲ್ಲಿ ಪ್ರಜೆಗಳು ಅರಮನೆಯಲ್ಲಿ ಅವರ ಆಹವಾಲನ್ನು ಕೇಳುವವರೆಗೆ ಆಶ್ರಯ ಪಡೆಯಬಹುದಂತೆ !

ಕೊಲ್ಲಾಪುರದಲ್ಲಿ ಸಾರ್ವತ್ರಿಕ ಮುಷ್ಕರ

ಕೊಲ್ಲಾಪುರ ಜ 13— ತಮ್ಮ ಸಂಬಳ ಹೆಚ್ಚಿಸಬೇಕೆಂದು ಇಲ್ಲಿಯ ಪ್ರಾಥಮಿಕ ಪಾಠಶಾಲಾ ಉಪಾಧ್ಯಾಯರು 13 ದಿನಗಳಿಂದ ಮುಷ್ಕರ ನಡೆಸುತ್ತಿರುವುದನ್ನು ರಾಜಾರಾಂ ಕಾಲೇಜು ಪ್ರೊಫೆಸರು ಕಾರ್ಯದರ್ಶಿಕರೂ ಮತ್ತು ಬಿ ಟಿ. ಕಾಲೇಜಿನ ಪ್ರಿನ್ಸಿಪಾಲ್ ದೇಸಾಯರೂ ಪ್ರೋತ್ಸಾಹಿಸಿದ್ದಕ್ಕಾಗಿ ಸಸ್ಪೆಂಡು ಮಾಡಲ್ಪಟ್ಟಿರು. ಇದನ್ನು ಪ್ರತಿಭಟಿಸಿ ಸರಕಾರದ ಗುಮಾಸ್ತರೂ ನೌಕರರೂ, ಸಕ್ಕರೆ ಕಾರ್ಖಾನೆ ವಿದ್ಯುಚ್ಛಕ್ತಾಲಯ ಆಸ್ಪತ್ರೆಗಳು ನೀರಿನ ಸರಬರಾಜು ಶಾಖೆಯ ಕೆಲಸಗಾರರೆಲ್ಲಾ ಸಾರ್ವತ್ರಿಕ ಮುಷ್ಕರವನ್ನಾರಂಭಿಸಿದರು ಈ ಮುಷ್ಕರಕ್ಕೆ ಮುಖಂಡರಾದ ಇಬ್ಬರು ಪುರುಷರೂ ಮತ್ತು ಒಬ್ಬ ಸ್ತ್ರೀ ಡಾಕ್ಟರು ದಸ್ತಗಿರಿ ಮಾಡಲ್ಪಟ್ಟರು : ಮತ್ತೆ 3 ಮಂದಿ 24 ಗಂಟೆಗಳೊಳಗೆ ಊರು ಬಿಟ್ಟು ಹೊರಡಬೇಕೆಂದು ಹುಕುಂ ಮಾಡಲಾಗಿದೆ. ಪರಿಸ್ಥಿತಿಯನ್ನು ಹದಗೊಳಿಸಲು ದಿವಾನರು ಕಾರ್ಮಿಕ ಮುಖಂಡರೊಡನೆ ಪರ್ಯಾಲೋಚಿಸುವರು.

— —

— ಲಂಡನ್ ಜ 13— ಬ್ರಿಟನ್ನಿನ ಕೈಗಾರಿಕೆಗಳಿಗೆ ಅವಶ್ಯಕವಾದ ಕಲ್ಲಿದ್ದಲಿನಲ್ಲಿ ಅರ್ಧದಷ್ಟು ಮಾತ್ರ ಕೊಡಲಾಗುವುದು

— ಜರೂಸೆಲಂ ಜ 13— ಲಂಡನ್ನಿನಲ್ಲಿ ನಡೆಯುವ ಸಮ್ಮೇಳನಕ್ಕೆ ಪ್ಯಾಲಿಸ್ಟೈನಿನ ಅರಬ್ಬರೂ ಹೋಗಲಿರುವರು. ಈ ಸಮ್ಮೇಳನ ತಾ|| 21 ರಲ್ಲಿ ಪ್ರಾರಂಭವಾಗುವುದು.

Latest

ಜಾಮೀನು ಅರ್ಜಿ ವಜ

ಚನ್ನಪಟ್ಟದ ಗಲಭೆ ಸಂಬಂಧದಲ್ಲಿ ಪೋಲೀಸಿನವರು ಹಾಕಿರುವ ಮೊಖದ್ದಮೆಯಲ್ಲಿ ಆಪಾದಿತರಾದ ಮುಸ್ಲಿಂ ಮತ್ತು ಹಿಂದೂಗಳು ಹಾಕಿದ್ದ ಜಾಮೀನು ಅರ್ಜಿ ತಿರಸ್ಕರಿಸಲ್ಪಟ್ಟಿದೆ.

ಕೌನ್ಸಿಲ್ ಮೀಟಿಂಗ್

ಈ ದಿನ ದಿವಾನರ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೀಟಿಂಗು ರಾಜಧಾನಿಯ ' ಲೇಕ್‌ಮ್ಯೂ ' ವಿನಲ್ಲಿ ನಡೆಯಿತು.

ಕಮ್ಯೂನಿಸ್ಟರ ಮೇಲೆ ಧಾಳಿ

ನವದೆಹಲಿ ಜ 13— ಡೆಲ್ಲಿಯಲ್ಲಿ ಕಮ್ಯೂನಿಸ್ಟರಿರುವೆಡೆಗಳಲ್ಲಿ 200 ಪೋಲೀಸರ. ಧಾಳಿ ನಡಸಿದರು.

ಹಿಂದೂ ಮಹಾಸಭೆ

ಬೆಂಗಳೂರು ಜ 14

ಮೈಸೂರು ಸಂ || ಹಿಂದೂ ಮಹಾಸಭಾ ಕಾರ್ಯಕಾರಿ ಸಮಿತಿ ವಿಶೇಷ ಸಭೆಯು ಬೆಂಗಳೂರು ನಗರದ ಪ್ರಧಾನ ಕಛೇರಿಯಲ್ಲಿ ತಾ || 20-1-46 ನೇ ಸೋಮವಾರ ಬೆಳಿಗ್ಗೆ 9 ಗಂಟೆಗೆ ಜರುಗುತ್ತದೆ. ಅಧಿವೇಶನಕ್ಕೆ ಸಂಬಂಧಪಟ್ಟ ವಿಷಯ ಮತ್ತು ಇತರ ಅತಿ ಜರೂರಾದ ವಿಷಯಗಳು ತೀರ್ಮಾನವಾಗಬೇಕಾಗಿರುವುದರಿಂದ ಸದಸ್ಯರೆಲ್ಲರೂ ತಪ್ಪದೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ವಿನಂತಿ ಮಾಡಿಕೊಂಡಿದ್ದಾರೆ.

ಟ್ರೂಮ್ಯ ಇಟಲಿಪ್ರಧಾನರ ಭೇಟಿ

ಇಟಲೀ ಪ್ರಧಾನರು ಅಧ್ಯಕ್ಷ ಟ್ರೂಮನ್ನರನ್ನು ಭೇಟಿ ಮಾಡಿದರು. ಇಟಲಿಗೆ ಎಲ್ಲಾ ಸಹಾಯ ಮಾಡುವುದಲಿಗಿ ಟ್ರೂಮನ್ನರು ಭರವಸೆ ಇತ್ತಿರುವುದಾಗಿ ಇಟಲಿ ಪ್ರಧಾನರು ತಿಳಿಸಿದರು.

ಶಾಸ್ತ್ರಜ್ಞರಿಗೆ ಪಾರ್ಟಿ

ಪಂ || ಜವಹರಲಾಲ ನೆಹರೂರವರು ಪರದೇಶಗಳಿಂದ ಬಂದ ಶಾಸ್ತ್ರಜ್ಞರಿಗೆ ಕೌನ್ಸಿಲ್ ಭವನದ ಮೈದಾನದಲ್ಲಿ ಪಲರ್ಟಿ ಕೊಟ್ಟರು

ವೃತ್ತಪತ್ರಗಳಿ ಸಂಪು

ಫ್ರಾನ್ಸಿನಲ್ಲಿಯು ೪ ಪಟ್ಟಣಗಳನ್ನು ಬಿಟ್ಟು ಉಳಿದ ಭಾಗದಲ್ಲಿ ಎಲ್ಲಿಯೂ ವರ್ತಮಾನಪತ್ರ ಹೊಂಟರುವುದಿಲ್ಲ

Office of the President
City Municipal Council, Mysore
Dated, 13th January 1947

Notification

Applications wiii be received for the post of the Municipal Advocate of the Myrore City Municipality from the Advocates of Mysore of not less than five years standing. The period of appointment will be co-terminus with that of the present Municipal Council. The monthly emoluments will be Rs. 150. Other particulars, regarding particulars of work etc., may be ascertained in the office of the undessigned.

R. Ramachandra Rao Bhombore
President

ಮೈಸೂರು ಸಿಟಿ ಮುನಿಸಿಪಲ್ ಪ್ರೆಸಿಡೆಂಟರ ಆಫೀಸಿನಿಂದಾ

ತಾ || 30—12—46

ಹರಾಜು ಇನ್ತಿಹಾರ್

ಮೈಸೂರು ಸಿಟಿ ಬಿಲ್ಲೇ ಮೊಹಲ್ಲಾ ರಾಮಾನುಜಾ ರೋಡಿನಲ್ಲಿರುವ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಿಸಿರುವ ಎಳು ಮಾದರಿ ಮನೆಗಳನ್ನು ತಾ || 20—1—47 ನೇ ಸೋಮವಾರದ ದಿನ (10) ಹತ್ತು ಗಂಟೆಗೆ ಸದರಿ ಮನೆಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಖುದ್ದು ಹಾಜರಾಗಿ ಹರಾಜಿನಲ್ಲಿ ಭಡಸವಾಲ್ ಮಾಡಿ ಸದರಿ ಮನೆಗಳನ್ನು ಪಡೆಯಬಹುದು.

ಹೆಚ್ಚಿಗೆ ವಿವರಗಳನ್ನು ತಿಳಿಯಲಪೇಕ್ಷೆಯುಳ್ಳವರು ಮೈಸೂರು ಸಿಟಿ ಮುನಿಸಿಪಲ್ ಇಂಜನಿಯರ್‌ರವರ ಆಫೀಸಿನಲ್ಲಿ ಮಧ್ಯಾಹ್ನ 3 ಗಂಟೆಯಿಂದ 5 ಗಂಟೆಯವರೆಗೆ ಆಫೀಸು ದಿವಸಗಳಲ್ಲಿ ತಿಳಿದುಕೊಳ್ಳಬಹುದು.

ಕೆ. ಜಿ. ಕಾಟ್ಟಿ
ಫಾರ್ ಪ್ರೆಸಿಡೆಂಟ್

At Opera — From 10-1-47

PONNURUVI

ಪೊನ್ನುರುವಿ

ಅಭಿನಯ — ಕೊತ್ತಮಂಗಳಂ ಸೀನು ಕೆ. ಟಿ. ರುಕ್ಮಿಣಿ ಟಿ.ಎ. ಡೊರೈರಾಜ್

At Ranjit——— 2-nd Glorious Week

CARAVAN

ಅರೂಣ್ — ಕಮಲಾ ಚಟರ್ಜಿ — ಪಾತ್ರವಹಿಸಿರುವ

ಕಾರವಾನ್

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿನಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್.
(ಹಿಂಗು. ಕೇಸರಿ ಮತ್ತು ಕಿರಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು.

Edited, Printed and Published by M. S Krishna Rao at the Satyavadi Press ChamarajAgrahar, Mysore.

Hearty Pongal Greetings
To all our customers
Friends & Patrons
Majestic Hotel, Mys